ಕರ್ನಾಟಕ ಸರ್ಕಾರ
ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ: ಕಾಶಿಇ/282ಸಿ/ಇಪಿಆರ್‌ಎಸ್/2022/ಭಾಗ-01/ಕಾನಿವ

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ
ಬೆಂಗಳೂರು, ದಿನಾಂಕ:೩1-09-2023.

ಇವರಿಗೆ,

1. ಜಂಟಿ ನಿರ್ದೇಶಕರು, ಪ್ರಾದೇಶಿಕ ಕಛೇರಿ, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು, ಮೈಸೂರು, ಶಿವಮೊಗ್ಗ , ಮಂಗಳೂರು , ಧಾರವಾಡ ಮತ್ತು ಕಲಬುರಗಿ.
2. ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ.

ಮಾನ್ಯರೆ,

ವಿಷಯ:- 2022-23ನೇ ಸಾಲಿನ E-parನಲ್ಲಿ ಭರ್ತಿ ಮಾಡಿದ ಕಾರ್ಯನಿರ್ವಹಣಾ ವರದಿಯನ್ನು ಸಲ್ಲಿಸುವ ಬಗ್ಗೆ.

ಉಲ್ಲೇಖ:- ಈ ಕಛೇರಿ ಸಮ ಸಂಖ್ಯೆ ಪತ್ರದ ದಿನಾಂಕ:24-04-2023.

********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಎಲ್ಲಾ ಗ್ರೂಪ್ "ಎ", "ಬಿ" ಮತ್ತು "ಸಿ" ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರು 2022-23ನೇ ಸಾಲಿನ E-parನಲ್ಲಿ ಭರ್ತಿ ಮಾಡಿ ಪೂರ್ಣಗೊಂಡ ನಂತರ ACR Completed Par Download ಮಾಡಿದ 09 ಪುಟಗಳ ಇ-ಫಾರ್ ಕಾರ್ಯನಿರ್ವಹಣಾ ವರದಿಯನ್ನು (ಬೋಧಕ ವರ್ಗದವರು ವಿಷಯವನ್ನು ಪ್ರತ್ಯೇಕವಾಗಿ ನಮೂದಿಸುವುದು, ನಮೂದಿಸದಿದ್ದಲ್ಲಿ ಅಂತಹ ವರದಿಗಳನ್ನು ಪರಿಗಣಿಸಲಾಗುವುದಿಲ್ಲ) ಹಾಗೂ ಬೋಧಕ/ಬೋಧಕೇತರ ವರ್ಗದವರು ಇ-ಫಾರ್ ವರದಿಯಲ್ಲಿ ಕಾಲೇಜಿನ ಮೊಹರನ್ನು ನಮೂದಿಸಿ ಆಸ್ತಿ-ಋಣ ಪಟ್ಟಿಯ ಒಂದು ಜೆರಾಕ್ಸ್ ಪ್ರತಿಯನ್ನು ಸಹ ಕಾರ್ಯನಿರ್ವಹಣಾ ವರದಿಯೊಂದಿಗೆ ಕಡ್ಡಾಯವಾಗಿ ಲಗತ್ತಿಸಿ ಕೇಂದ್ರಕಛೇರಿಗೆ ಸಲ್ಲಿಸುವಂತೆ ಉಲ್ಲೇಖಿತ ಪತ್ರದಲ್ಲಿ ಸೂಚಿಸಲಾಗಿತ್ತು.

ಈ ಸಂಬಂಧ ಪರಿಶೀಲಿಸಲಾಗಿ ಇಲ್ಲಿವರೆವಿಗೂ ಕೆಲವು ಪ್ರಾದೇಶಿಕ ಜಂಟಿ ನಿರ್ದೇಶಕರ ಕಛೇರಿ ಮತ್ತು ಕಾಲೇಜುಗಳಿಂದ ಮಾತ್ರ 2022-23ನೇ ಸಾಲಿನ ACR Completed Par ನ ವರದಿಯು ಸ್ವೀಕೃತಗೊಂಡಿರುತ್ತದೆ. ಉಳಿದ ಪ್ರಾದೇಶಿಕ ಜಂಟಿ ನಿರ್ದೇಶಕರ ಕಛೇರಿ ಹಾಗೂ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರುಗಳ ಕಾರ್ಯನಿರ್ವಹಣಾ ವರದಿಗಳನ್ನು ದಿನಾಂಕ: 30-09-2023ರ ಒಳಗಾಗಿ ಕೇಂದ್ರಕಛೇರಿಗೆ ಸಲ್ಲಿಸುವಂತೆ ತಿಳಿಸಲಾಗಿದ್ದು, ತಪ್ಪಿದ್ದಲ್ಲಿ ಪ್ರಾಂಶುಪಾಲರುಗಳನ್ನೇ ನೇರ ಹೊಣೆಗಾರರನ್ನಾಗಿ ಮಾಡಲಾಗುತ್ತದೆ ಎಂದು ತಿಳಿಸಲಾಗುತ್ತಿದೆ.

ತಮ್ಮ ವಿಶ್ವಾಸಿ

ಕಾಲೇಜು ಶಿಕ್ಷಣ ನಿರ್ದೇಶಕರು

ಪ್ರತಿಯನ್ನು

1. ಕೇಂದ್ರ ಕಛೇರಿಯ ಎಲ್ಲಾ ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರುಗಳ, ಅಗತ್ಯ ಕ್ರಮಕ್ಕಾಗಿ.
2. ಮಾಹಿತಿ ಅಧಿಕಾರಿಗಳು, ಕೇಂದ್ರ ಕಛೇರಿ, ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
3. ರಕ್ಷಕ ಕಡತ.
4. ಕಛೇರಿ ಪ್ರತಿ.